KAUK620004762017

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರ ನ್ಯಾಯಾಲಯ, ಹೊನ್ನಾವರ.**

**ಅಸಲು ದಾವಾ ಸಂಖ್ಯೆ 26/2017.**

**ವಾದಿ** : ಶ್ರೀ ರಾಮಚಂದ್ರ ಗಜಾನನ ಹೆಗಡೆ

**-ವಿರುದ್ಧ-**

**ಪ್ರತಿವಾದಿಯರು** : ಶ್ರೀ ಲೋಕೇಶ ಗಣಪಯ್ಯ ನಾಯ್ಕ ಮತ್ತು ಇತರರು

**ಮಧ್ಯಕಾಲೀನ ಅರ್ಜಿ ಸಂಖ್ಯೆ 5 ರ ಪಕ್ಷಗಾರರುಗಳು.**

**ಅರ್ಜಿದಾರರುಃ-** ಶ್ರೀ ರಾಮಚಂದ್ರ ಗಜಾನನ ಹೆಗಡೆ

**-ವಿರುದ್ಧ-**

**ಎದುರುದಾರರುಃ-** ಶ್ರೀ ಲೋಕೇಶ ಗಣಪಯ್ಯ ನಾಯ್ಕ ಮತ್ತು ಇತರರು

**ಃಃ ಸಿ.ಪಿ.ಸಿ. ಕ್ರಮಾದೇಶ 16 ನಿಯಮ 6 ರ ಮೇಲಿನ ಆದೇಶ ಃಃ**

ವಾದಿಯ ಪರ ವಕೀಲರು ಸಿ.ಪಿ.ಸಿ., ಕ್ರಮಾದೇಶ 16 ನಿಯಮ 6 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ದಾವಾ ಪರಿಶಿಷ್ಟದಲ್ಲಿ ಕಾಣಿಸಿರುವ ಸ್ವತ್ತಿಗೆ ಸಂಬಂಧಿಸಿದಂತೆ ಇರುವ ಎಲ್ಲಾ ದಾಖಲಾತಿಗಳನ್ನು ಒಳಗೊಂಡ ಕಡತದ ನಂ. 34 ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಸಮಾಜ ಕಲ್ಯಾಣ ಇಲಾಖೆ ಹೊನ್ನಾವರ ಇವರಿಗೆ ಆದೇಶ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

2. **ಅರ್ಜಿಯ ಸಂಕ್ಷಿಪ್ತ ಸಾರಾಂಶಃ–**

ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಶಾಶ್ವತ ಪ್ರತಿಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿರುತ್ತಾರೆ. ದಾವಾ ಸ್ಥಳವು ವಾದಿಯರ ಅತಿಕ್ರಮಣ ಸ್ಥಳವಾಗಿದ್ದು, ಸದರಿ ಸ್ಥಳವು ವಾದಿಯರ ಪೂರ್ವಜರ ಕಾಲದಿಂದಲೂ ಅತಿಕ್ರಮಣವಾಗಿ ವಾದಿಯರ ತಾಬಾ ಆಗಿರುತ್ತದೆ . ಸದರಿ ಸ್ಥಳದಲ್ಲಿ ಈ ದಾವೆಯ ಪ್ರತಿವಾದಿಯರಿಗೆ ಯಾವುದೇ ಹಕ್ಕು ಮತ್ತು ಕಬ್ಜಾ ಇರುವುದಿಲ್ಲ. ದಾವಾ ಸ್ಥಳವನ್ನು ಮಂಜೂರು ಮಾಡಿಕೊಡುವಂತೆ ವಾದಿಯರು ಈಗಾಗಲೇ ಅರ್ಜಿಯನ್ನು ತುಂಬಿದ್ದು, ಸದರಿ ಅರ್ಜಿಯ ವಿಚಾರಣೆಗೆ ಸಂಬಂಧಪಟ್ಟ ಇಲಾಖೆಯಾದ ಸಮಾಜ ಕಲ್ಯಾಣ ಇಲಾಖೆ ಹೊನ್ನಾವರದಲ್ಲಿ ವಿಚಾರಣೆಗೆ ಬಂದಿದ್ದು, ಮೂಲ ಕಡತದ ಸಮಾಜ ಕಲ್ಯಾಣ ಇಲಾಖೆ ಹೊನ್ನಾವರದಲ್ಲಿರುತ್ತದೆ. ಅಲ್ಲದೇ ಕಡತ ನಂ. 34 ಅದರಲ್ಲಿ ಎಲ್ಲಾ ಮೂಲ ದಾಖಲೆಗಳು ಇರುತ್ತವೆ. ಮತ್ತು ಅದು ಮಂಜೂರಿ ಹಂತದಲ್ಲಿಯೂ ಸಹ ಇರುತ್ತದೆ. ಈಗಾಗಲೇ ಪ್ರಸ್ತುತ ದಾವೆಯಲ್ಲಿ ಅವುಗಳ ನಕಲನ್ನು ಹಾಜರುಪಡಿಸಲಾಗಿದೆ. ಸದರಿ ದಾಖಲಾತಿಗಳು ದಾವಾ ಇತ್ಯರ್ಥಕ್ಕೆ ತೀರಾ ಅವಶ್ಯಕವಿದ್ದು, ಅದರ ಮೂಲ ದಾಖಲಾತಿಗಳನ್ನು ಹಿಂದೆ ಪಡೆಯಲು ಸಾಧ್ಯವಾಗಿಲ್ಲ. ಆದ್ದರಿಂದ ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸಿ ಸದರಿ ಕಡತ ನಂ. 34 ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಸಮಾಜ ಕಲ್ಯಾಣ ಇಲಾಖೆ ಹೊನ್ನಾವರ ಇವರಿಗೆ ಆದೇಶ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

3. ಸದರಿ ಅರ್ಜಿಗೆ ಪ್ರತಿವಾದಿಯ ಪರ ವಕೀಲರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ವಾದಿಯು ಕೇಳಿದ ಕಾಗದಪತ್ರಗಳು ಸರ್ಕಾರಿ ದಾಖಲೆಯಲ್ಲಿರುವ ಕಡತಗಳಾಗಿರುವುದರಿಂದ ಅವುಗಳ ದೃಢೀಕೃತ ನಕಲುಗಳನ್ನು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ. ಮತ್ತು ವಾದಿಯು ಅನಾವಶ್ಯಕವಾಗಿ ದಾವೆಯನ್ನು ವಿಳಂಬ ಮಾಡುವ ಉದ್ದೇಶದಿಂದ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಆದ್ದರಿಂದ, ಪ್ರಸ್ತುತ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

4. ಉಭಯ ಪಕ್ಷಗಾರರ ವಕೀಲರ ವಾದವನ್ನು ಆಲಿಸಿದ ನಂತರ ಈ ಅರ್ಜಿಯ ನಿರ್ಧರಣೆಗಾಗಿ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

1. ಕಡತ ನಂ. 34 ನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುವಂತೆ, ಸಮಾಜ ಕಲ್ಯಾಣ ಇಲಾಖೆ ಹೊನ್ನಾವರ ಇವರಿಗೆ ಆದೇಶ ಮಾಡುವ ಅವಶ್ಯಕತೆ ಇದೇಯಾ?

2. ಯಾವ ಆದೇಶ?

**5.** ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಮುಂದಿನಂತೆ ಉತ್ತರಿಸಿದ್ದೇನೆ .

ಅಂಶ ಸಂಖ್ಯೆ 1 : ನಕಾರಾತ್ಮಕವಾಗಿ

ಅಂಶ ಸಂಖ್ಯೆ 2 : ಮುಂದಿನ ಆದೇಶದಂತೆ

## ಕಾರಣಗಳು

6. **ಅಂಶ ಸಂಖ್ಯೆ1:** ಪರಿಶೀಲಿಸಲಾಯಿತು. ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಶಾಶ್ವತ ಪ್ರತಿಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿಯ ಪರ ವಕೀಲರು ತಮ್ಮ ಅರ್ಜಿಯಲ್ಲಿ ಹೇಳಿರುವ ಅಂಶಗಳನ್ನು ಪರಿಶೀಲಿಸಿದಾಗ , ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳು ಕಡತ ನಂ. 34 ರಲ್ಲಿ ಇದ್ದು, ಅದು ಸಮಾಜ ಕಲ್ಯಾಣ ಇಲಾಖೆ ಹೊನ್ನಾವರದಲ್ಲಿ ಇರುತ್ತದೆ. ವಾದಿಯು ತನ್ನ ದಾವೆಗೆ ಸದರಿ ದಾಖಲೆಗಳು ಅವಶ್ಯಕವಾಗಿದೆ ಎಂದು ಹೇಳಿರುತ್ತಾರೆ. ಆದರೆ, ಪ್ರತಿವಾದಿ ಪರ ವಕೀಲರು ಹೇಳುವುದೇನೆಂದರೇ, ಸದರಿ ದಾಖಲೆಗಳು ಸರ್ಕಾರದ ಕಡತದಲ್ಲಿರುವ ದಾಖಲೆಗಳಾಗಿವೆ ಅವುಗಳ ದೃಢೀಕೃತ ನಕಲುಗಳ ಪ್ರತಿಯನ್ನು ಪಡೆಯುವ ಅವಕಾಶ ಇದ್ದರೂ ಸಹ ವಾದಿಯ ಪರ ವಕೀಲರು ಆ ರೀತಿಯ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದು ಹೇಳಿರುತ್ತಾರೆ. ಈ ನ್ಯಾಯಾಲಯವು ಇಬ್ಬರೂ ವಕೀಲರ ವಾದವನ್ನು ಆಲಿಸಿದ ನಂತರ ನ್ಯಾಯಾಲಯದ ಗಮನಕ್ಕೆ ಬಂದದ್ದೇನೆಂದರೇ, ವಾದಿಯು ಹೇಳಿದಂತಹ ದಾಖಲೆಯು ಸರ್ಕಾರದ ಕಡತದಲ್ಲಿರುವ ದಾಖಲೆಯಾಗಿದ್ದು, ಅವುಗಳನ್ನು ಅಂದರೆ ಕಡತ ನಂ. 34 ರ ದಾಖಲೇಗಳ ದೃಢೀಕೃತ ನಕಲುಗಳನ್ನು ಪಡೆಯಲು ವಾದಿ ಪರ ವಕೀಲರಿಗೆ ಅವಕಾಶವಿದೆ ಎಂದು, ಮತ್ತು ಸದರಿ ಅರ್ಜಿಯನ್ನು ಪುರಸ್ಕರಿಸಿದರೇ ಕಾಲ ವಿಳಂಬ ಉಂಟಾಗಿ ನ್ಯಾಯದಾನ ಮಾಡುವ ಪ್ರಕ್ರಿಯೆಗೆ ಅಡ್ಡಿ

ಉಂಟಾಗುತ್ತದೆ ಎಂದು ಮತ್ತು ಪರಿಗಣಿಸಿ, **ಅಂಶ ಸಂಖ್ಯೆ 1 ನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

7. **ಅಂಶ ಸಂಖ್ಯೆ 2**: ಮೇಲ್ಕಂಡ ಕಾರಣಗಳಿಗೆ ಈ ಮುಂದಿನಂತೆ ಆದೇಶಿಸಲಾಗಿದೆ.

:**ಆದೇಶ:**

ವಾದಿಯರ ಪರ ವಕೀಲರು ಸಿ.ಪಿ.ಸಿ. ಕ್ರಮಾದೇಶ 16 ನಿಯಮ 6 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 5 ನ್ನು ವಜಾ ಮಾಡಲಾಗಿದೆ.

sd/-

(ಈರಣ್ಣ ಹುಣಶಿಕಟ್ಟಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊನ್ನಾವರ.

***********